ಇ. 122 ಎಕರೆ ಕ್ಷೇತ್ರ ನೀರಾವರಿಗೆ ಒಳಪಡುವುದು. ಅಂದಾಜು ಮೊತ್ತ 9.90 ಲಕ್ಷ ರೂ.ಗಳು.

ಈ ಇಲ್ಲ.

ಉ. ಯೋಜನೆಯ ಅಂದಾಜಿಗೆ ಸಮಕ್ಷ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್. ರಂಗನಾಥ್(ಲೋಕೋಪಯೋಗಿ) : ಮಾನ್ಯ ಅಧ್ಯಕ್ಷರೇ, 5-9-94 ರ ಲಿಖಿತ ಮೂಲಕ ಉತ್ತರಿಸುವ 8 ನೇ ಪಟ್ಟಿಯಲ್ಲಿರುವ 54 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 475, 203, 302, 332, 163, 472, 335,ಸ 235, 666, 669, 522,ಸ 739, 236, 236(ಎ) 730, 668, 672, 738, 736 ಮತ್ತು 424 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 34 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ : ತೀರ್ಥಹಳ್ಳಿ ತಾಲ್ಲೂಕಿನ ಅರಗ-ಬೆಳೂರು ರಸ್ತೆಯ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 364 (204)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥ ಹಳ್ಳಿ ತಾಲ್ಲೂಕಿನ ಅರಗ-ಬೆಳೂರು ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ;

ಆ) ಈ ರಸ್ತೆಯನ್ನು ಅಭಿವೃದ್ಧಿಪಡಿಸಿದರೆ ಕೊಲ್ಲೂರು ಹೊಸನಗರ, ನಗರ, ನಾಗೋಡಿ, ಕುಂದಾಪುರ ಈ ಸ್ಥಳಗಳಿಗೆ ತುಂಬಾ ಹತ್ತಿರದ ರಸ್ತೆಯಾಗುತ್ತದೆ ಎಂಬುದರ ಬಗ್ಗೆ ಸರ್ಕಾರ ಗಮನಹರಿಸಿದೆಯೇ?

ಇ) ಹಾಗಿದ್ದಲ್ಲಿ ಇವುಗಳ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಕೆ.ಹೆಚ್. ರಂಗನಾಥ್

(ಲೋಕೋಪಯೋಗಿ ಸಚಿವರು)

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಸದರಿ ರಸ್ತೆಯನ್ನು ಅಭ್ಯಿದ್ಧಿಪಡಿಸುವ ಬಗ್ಗೆ ಸಾರ್ವಜನಿಕರ ಬೇಡಿಕೆ ಇರುತ್ತದೆ.

ಆ) ಹೌದು.